ಆ) ಮಾನ್ಯ ಪ್ರಧಾನಿಯವರು ಆದಷ್ಟು ತ್ವರಿತವಾಗಿ ತೀರ್ಮಾನ ತೆಗೆದುಕೊಳ್ಳುವುದಾಗಿ ಭರವಸೆ ಕೊಟ್ಟಿದ್ದಾರೆ.

ಇ) ಮತ್ತು ಈ) ೧೯೮೨-೮೩ ರಲ್ಲಿ ೧.೪ ಕೋಟಿ, ೧೯೮೩-೮೪ ರಲ್ಲಿ ೦ ಕೋಟಿ ರೂಪಾಯಿಗಳನ್ನು ಕೇಂದ್ರ ಆಯವ್ಯಯ ಪತ್ರದಲ್ಲಿ ಒದಗಿಸಲಾಗಿದೆ ಎಂದು ತಿಳಿದು ಬಂದಿದೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯ (ಅ) ಕಲಮಿನ ಮೇರೆಗೆ ಹೊರಡಿಸಿದ ೧೯೮೦-೮೧ನೇ ವರ್ಷದ ಎನ್.ಜಿ.ಇ.ಎಫ್. (ಲಿಮಿಟೆಡ್) ನ ೧೬ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ವಿ.ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ೧೯೫೬ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ ಶಾಸನದ ೯ (೨) ಕಲಮಿನ ಮೇರೆಗೆ ಹೊರಡಿಸಿದ ಕೈಗಾರಿಕೆಗಳಲ್ಲಿ ಹಿಂದುಳಿದ ಜಿಲ್ಲೆ ಎಂದು ಅಧಿಸೂಚಿಸಿದ ಕೈಗಾರಿಕೆಗಳಿಗೆ ಕರಾರು ಪತ್ರಗಳನ್ನು ಬರೆದುಕೊಡುವುದಕ್ಕೆ ಸಂಬಂಧಿಸಿದ ಸ್ಟ್ಯಾಂಪು ಶುಲ್ಕ ವಿನಾಯಿತಿಗೆ ಸಂಬಂಧಿಸಿದ ದಿನಾಂಕ ಮಾರ್ಚ್ ೧೦, ೧೯೮೩ ರ ಆರ್.ಡಿ. ೧೭ ಇ.ಎಸ್.ಟಿ. ೮೦ ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುತ್ತೇನೆ.

ಉಪಾಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮುಂಡನೆ ಮಾಡಲಾಗಿದೆ.

ಮನವಿಗಳು

ಶ್ರೀ ವಿ. ಧನಂಜಯಕುಮಾರ್.—ಸ್ವಾಮಿ, ದಕ್ಷಿಣಕನ್ನಡ ಜಿಲ್ಲೆಯಲ್ಲಿ ಜನರು ಅಕ್ಕಿ ಇಲ್ಲದೆ ಸಾಯುತ್ತಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಇಂದು ಉತ್ತರ ಕೊಡುವುದಾಗಿ ಹೇಳಿದ್ದರು.

ಉಪಾಧ್ಯಕ್ಷರು.—ನಾಳೆ ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ನಗರದ ಸದರನ್ ಸ್ಪೀಕರ್ ಎಂಬ ಸಂಜೆ ಪತ್ರಿಕೆ ನಿಂತುಹೋಗಿದೆ. ಅಲ್ಲಿ ಕೆಲಸ ಮಾಡುತ್ತಿದ್ದ ಪತ್ರಿಕೋದ್ಯೋಗಿಗಳಿಗೆ ಕೆಲಸವಿಲ್ಲ. ಈ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

MR. DEPUTY SPEAKER.—You have given a notice. I will examine the same and fix the date and time at the earliest possible.

ಒಬ್ಬ ಮಾನ್ಯ ಸದಸ್ಯರು —ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗನ ಕಾಯಿಲೆಯ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ. ಅದು ಏನಾಯಿತಂ?.

ಉಪಾಧ್ಯಕ್ಷರು.—ಅದನ್ನು ನೋಡುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.—ನಗರದ ಕೆಲವು ಭಾಗದಲ್ಲಿ ವಿದ್ಯುಚ್ಛಕ್ತಿ ಬೆಳಿಗ್ಗೆ ೬ ಗಂಟೆಗೆ ನಿಂತು ಹೋಗುತ್ತದೆ. ಈ ರೀತಿ ನಿಂತುಹೋಗುವುದರಿಂದ ಎಲ್ಲರಿಗೂ ತೊಂದರೆಯಾಗುತ್ತಿದೆ.

ಉಪಾಧ್ಯಕ್ಷರು —ತಾವು ನನ್ನ ಕೊಠಡಿಗೆ ಬನ್ನಿ. This is not a place to discuss it. Please come to my Chamber. I am here to protect the interests of all the Members. We will discuss there.